**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಭದ್ರಾವತಿ**

**ಸಿ ಸಿ ಸಂಖ್ಯೆ: 1207/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಭದ್ರಾವತಿ ಆದ ನಾನು

1. ಬಸ್ಯಾನಾಯ್ಕ
   ಬಿನ್ ರಾಮನಾಯ್ಕ, 41 ವರ್ಷ.
2. ರೇಖ್ಯಾನಾಯ್ಕ
   ಬಿನ್ ರಾಮನಾಯ್ಕ, 40 ವರ್ಷ.
3. ವಿಷ್ಣುನಾಯ್ಕ
   ಬಿನ್ ದೂದ್ಯಾನಾಯ್ಕ, 33 ವರ್ಷ.
4. ಪ್ರದೀಪ್‌ನಾಯ್ಕ
   ಬಿನ್ ದೂದ್ಯಾನಾಯ್ಕ, 32 ವರ್ಷ.
   ಎಲ್ಲರ ವಾಸಃ ಕೋಮಾರನಹಳ್ಳಿ ತಾಂಡ ಗ್ರಾಮ,
   ಭದ್ರಾವತಿ ತಾಲ್ಲೂಕು.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಏನೆಂದರೆಃ-

ಮೊದಲನೆಯದಾಗಿ, ದಿನಾಂಕ 21.10.2025 ರಂದು ರಾತ್ರಿ 10.30 ಗಂಟೆ ಸಮಯದಲ್ಲಿ, ಭದ್ರಾವತಿ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯ, ಭದ್ರಾವತಿ ತಾಲ್ಲೂಕಿನ ಕೋಮಾರಾನಹಳ್ಳಿ ಗ್ರಾಮದ ವೃತ್ತದಲ್ಲಿ, ಸಮಾನ ಉದ್ದೇಶದಿಂದ,

ಆರೋಪಿತರಾದ ನೀವು ಚಾಸಾ–1/ಚರಣ್‌ಕುಮಾರ, ಚಾಸಾ–4/ಮನೋಜ್ ಕುಮಾರ್ ಮತ್ತು ಚಾಸಾ–5/ಯಶವಂತರವರ ಜೊತೆ ಜಗಳ ತೆಗೆದು ಅವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತ ಕಲಂ 352 ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಕೈಗಳಿಂದ ಚಾಸಾ–1, 4 ಮತ್ತು 5 ರವರಿಗೆ ಹೊಡೆದು ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನೀವು ಕಲ್ಲಿನಿಂದ ಚಾಸಾ–1, 4 ಮತ್ತು 5 ರವರಿಗೆ ಹೊಡೆದು ಹಾಗೂ 2 ನೇ ಆರೋಪಿಯಾದ ನೀವು ಮಚ್ಚಿನಿಂದ ಚಾಸಾ–1 ರವರಿಗೆ ಹೊಡೆದು ಅವರಿಗೆ ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತ ಕಲಂ 118(1) ಸಹ ಕಲಂ

3(5)ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ–1, 4 ಮತ್ತು 5 ರವರಿಗೆ ಜೀವ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 17.07.2026

**(ಹನುಮಂತ ಜಿ.ಹೆಚ್.)**
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಭದ್ರಾವತಿ.**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ**

**ನ್ಯಾಯಾಲಯ, ಭದ್ರಾವತಿ**

**ಸಿ ಸಿ ಸಂಖ್ಯೆ 1207/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್ಎಲ್.ಎಮ್., 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಭದ್ರಾವತಿ ಆದ ನಾನು

1. ಬಸ್ಯಾನಾಯ್ಕ,
   ಬಿನ್ ರಾಮನಾಯ್ಕ,
   41 ವರ್ಷ.
2. ರೇಖ್ಯಾನಾಯ್ಕ,
   ಬಿನ್ ರಾಮನಾಯ್ಕ,
   40 ವರ್ಷ.
3. ವಿಷ್ಣುನಾಯ್ಕ,
   ಬಿನ್ ದೂದ್ಯಾನಾಯ್ಕ,
   33 ವರ್ಷ.
4. ಪ್ರದೀಪ್‌ನಾಯ್ಕ,
   ಬಿನ್ ದೂದ್ಯಾನಾಯ್ಕ,
   32 ವರ್ಷ.
   ಎಲ್ಲರ ವಾಸಃ ಕೋಮಾರನಹಳ್ಳಿ ತಾಂಡ ಗ್ರಾಮ,
   ಭದ್ರಾವತಿ ತಾಲ್ಲೂಕು.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**(ಹನುಮಂತ ಜಿ.ಹೆಚ್.)**

ದಿನಾಂಕಃ 17.07.2026

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಭದ್ರಾವತಿ.**